ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ

ಸಂಖ್ಯೆ:ಸಕಾಇಂ:ನಂ1:ಲೋಇ:ಉವಿ:ಬೆಂದ:2024-25 / 756.

ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ 1 ಲೋ.ಇ ದಕ್ಷಿಣ ಉಪವಿಭಾಗ,
ಕೆ.ಆರ್.ವೃತ್ತ, ಬೆಂಗಳೂರು.
ದಿನಾಂಕ: 18/02/2025

ರವರಿಗೆ,

Secretary
Innovative International Public School,
Shree Shamanna Educational Trust (R),
Ramasandra, Sulikere post, Kengeri Hobli
Bangalore-560060.

ಮಾನ್ಯರೇ,

ವಿಷಯ: ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಮಸಂದ್ರ ಸೂಲಿಕೆರೆ ಪೋಸ್ಟ್, ಬೆಂಗಳೂರಿನಲ್ಲಿರುವ Innovative International Public School, Shree Shamanna Educational Trust (R) ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 07-05-2022
2. ಸರ್ಕಾರದ ಸುತ್ತೋಲೆ ಸಂಖ್ಯೆ: ಲೋಇ 59 ಬಿಇಡಿ 2019, ದಿನಾಂಕ: 25-09-2024
3. Secretary, Innovative International Public School, Shree Shamanna Educational Trust (R), ರವರ ಪತ್ರ ಈ ಕಛೇರಿಯಲ್ಲಿ ಸ್ವೀಕೃತವಾದ ದಿನಾಂಕ: 07-01-2025.
4. ಈ ಕಛೇರಿ ಪತ್ರ ಸಂಖ್ಯೆ: 663/2024-25, ದಿನಾಂಕ: 13-01-2025

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಮಸಂದ್ರ ಸೂಲಿಕೆರೆ ಪೋಸ್ಟ್, ಬೆಂಗಳೂರಿನಲ್ಲಿರುವ Innovative International Public School, Shree Shamanna Educational Trust (R) ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ಶಿಕ್ಷಣ ಇಲಾಖೆಗೆ ಒದಗಿಸಲು ಅಗತ್ಯವಿರುವುದಾಗಿ ತಿಳಿಸಿ ಕಟ್ಟಡದ ಸುರಕ್ಷಾ ಪ್ರಮಾಣ ಪತ್ರ ನೀಡಲು ಉಲ್ಲೇಖ (3) ರ ಪತ್ರದಲ್ಲಿ ಮನವಿಯನ್ನು ಸಲ್ಲಿಸಿರುತ್ತೀರಿ.

ಸದರಿ ಕಟ್ಟಡವು ಶೈಕ್ಷಣಿಕ ಉದ್ದೇಶಕ್ಕೆ ಸೂಕ್ತವಾಗಿರುವುದರ ಬಗ್ಗೆ ಉಲ್ಲೇಖಿತ (1) ರ ಸರ್ಕಾರದ ಆದೇಶದಂತೆ ಸದರಿ ವಿವರಗಳನ್ನು ನಮೂನೆಯಲ್ಲಿ ಭರ್ತಿ ಮಾಡಿ ಉಲ್ಲೇಖಿತ (2) ರಲ್ಲಿ ಸಲ್ಲಿಸಲಾಗಿರುತ್ತದೆ. ಸದರಿ ಕಟ್ಟಡದ ನಕ್ಷೆಯನ್ನು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಸೂಲಿಕೆರೆ ಗ್ರಾಮ ಪಂಚಾಯಿತಿ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು ರವರಿಂದ ಅನುಮೋದನೆ ನೀಡಲಾಗಿರುತ್ತದೆ.

ಸದರಿ ಕಟ್ಟಡವನ್ನು ನೆಲಮಹಡಿ ಮತ್ತು ಒಂದು ಮೇಲ್ಮಹಡಿಗಳನ್ನು ಒಳಗೊಂಡಂತೆ 2019ನೇ ಸಾಲಿನಲ್ಲಿ ನಿರ್ಮಿಸಲಾಗಿರುತ್ತದೆ. ಸದರಿ ಕಟ್ಟಡಗಳಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿರುತ್ತದೆ.

ಸದರಿ ಕಟ್ಟಡವನ್ನು ಆರ್ಥಿಕ ವರ್ಷ 2019 ನೇ ಸಾಲಿನಲ್ಲಿ ನಿರ್ಮಿಸಲಾಗಿದ್ದು ಕಟ್ಟಡದ ಸುರಕ್ಷತೆಗೆ ಸಂಬಂಧಿಸಿದಂತೆ, ಕಟ್ಟಡದ ಸದೃಢತೆಯ ಬಗ್ಗೆ ದಿನಾಂಕ: 28-01-2025 ರ ಮಾಹೆಯಲ್ಲಿ Faculty of Engineering – Civil, University Visvesvaraya College of Engineering, Bangalore University, Jnanabharathi Campus, Bengaluru – 560056 ಮುಖಾಂತರ ಪರೀಕ್ಷೆಗಳನ್ನು ಕೈಗೊಂಡು ವರದಿಯ ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ನಡೆಸಲಾದ ಪರೀಕ್ಷೆಯ ವರದಿಯಂತೆ ಕಟ್ಟಡವು ಸದೃಢತೆಯಿಂದ ಇರುವುದು ಕಂಡು ಬಂದಿರುತ್ತದೆ.

ಉಲ್ಲೇಖಿತ (1) ರ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಕಟ್ಟಡ ಸುರಕ್ಷತೆ ಪ್ರಮಾಣ ಪತ್ರವನ್ನು ವಿತರಿಸಲು ಮೊತ್ತ ರೂ.5,000/- (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು Innovative International Public School, Shree Shamanna Educational Trust (R) ರವರು Federal Bank, Visweswaraya Layout Branch, Bangalore, ಡಿ.ಡಿ ಸಂಖ್ಯೆ:184567, ದಿನಾಂಕ:15-02-2025 ರಲ್ಲಿ ಈ ಕಛೇರಿಗೆ ಪಾವತಿಸಿರುತ್ತಾರೆ. ಸದರಿ ಕಟ್ಟಡದಲ್ಲಿ Innovative International Public School, Shree Shamanna Educational Trust (R) ರವರು ಒದಗಿಸಿರುವ ಮಾಹಿತಿಯಂತೆ ಕೊಠಡಿಗಳ ಸಂಖ್ಯೆ ಈ ಕೆಳಗಿನಂತಿರುತ್ತದೆ.

| ಕ್ರ. ಸಂ. | ಅನುಮೋದಿತ ಕಟ್ಟಡದ ನಕ್ಷೆಯ ವಿವರಗಳು | ಕೊಠಡಿಗಳ ವಿವರಗಳು |
|---|---|---|
| 1. | Ground Floor | Class Rooms - 12<br>Water Closet – 04 |
| 2. | 1st Floor | Class Rooms - 12<br>Water Closet – 04 |

ಸದರಿ ಕಟ್ಟಡದ ಭೌತಿಕ ಸ್ಥಿತಿಯನ್ನು ದಿನಾಂಕ: 17-02-2025 ರಂದು ಖುದ್ದಾಗಿ ಭೇಟಿ ನೀಡಿ ಶಾಲಾ ಕಟ್ಟಡವನ್ನು ಪರಿಶೀಲಿಸಲಾಗಿ, ಕಟ್ಟಡಕ್ಕೆ ಕಾಲಕಾಲಕ್ಕೆ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳುವ ಅವಶ್ಯಕತೆ ಇರುತ್ತದೆ. ಗೋಡೆಗಳಲ್ಲಿನ Cracks ಗಳನ್ನು ಸರಿಪಡಿಸಿ ಕಟ್ಟಡದ ನಿರ್ವಹಣೆಯನ್ನು ಮಾಡುವ ಷರತ್ತಿಗೆ ಒಳಪಟ್ಟು, ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ರಾಮಸಂದ್ರ ಸೂಲಿಕೆರೆ ಪೋಸ್ಟ್, ಬೆಂಗಳೂರಿನಲ್ಲಿರುವ Innovative International Public School, Shree Shamanna Educational Trust (R) ಕಟ್ಟಡದ ನೆಲಮಹಡಿ ಹಾಗೂ ಒಂದು ಮೇಲ್ಮಹಡಿಗಳಿಗೆ ಮುಂದಿನ ಎರಡು ಶೈಕ್ಷಣಿಕ ವರ್ಷಗಳಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಉಪಯೋಗಿಸಲು ಶಾಲಾ ಕಟ್ಟಡಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡಲಾಗಿದೆ ಹಾಗೂ "Fire Safety Certificate" ಅನ್ನು ಮುಖ್ಯ ಅಗ್ನಿಶಾಮಕ ಅಧಿಕಾರಿಯವರಿಂದ ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ನಂ 1 ಲೋ.ಇ ದಕ್ಷಿಣ ಉಪವಿಭಾಗ,
ಬೆಂಗಳೂರು.